28-02-2000

ಆನಂದ ಕುಟೀರ, ಪುತ್ತೂರು.

ಪರೀಕ್ಷಿತ – ಈಗ ಈ ದೇಹವು ಜೀವಂತವಾಗಿ ಉಂಟಜ್ಜ. ಅದು ಈಗ ನೋಡ್ತದೆ. ಮಾತಾಡ್ತದೆ. ಜೀವಂತವಾಗಿ ಉಂಟು.

ಅಜ್ಜ – ಇದರ ಮೂಲಕ ಮಾತ್ತಾಡುವಂಥದ್ದು ಒಳಗೆ ಉಂಟು.

ಪರೀಕ್ಷಿತ – ಛೆ. ಅಲ್ಲಾ. ಒಟ್ಟು ಈ ದೇಹ ಎಂಬ ಯಂತ್ರವನ್ನು ಉಪಯೋಗಿಸಿಕೊಂಡು ಒಂದು ಶಕ್ತಿ ಕೆಲಸ ಮಾಡ್ತಾ ಇದೆ. ನೀವೀಗ ಹೇಳ್ತೀರಿ ಆ ಶಕ್ತಿಯ ಅಸ್ತಿತ್ವದ ನಾಶವೇ ಆತ್ಮ ಸಾಕ್ಷಾತ್ಕಾರ ಅಂತ. ಹಾಗಾದ್ರೆ ಈ ದೇಹ ಮಾತ್ನಾಡುವುದು ಹೇಗೆ? ಆ ಶಕ್ತಿ ಇಲ್ಲಾ ಅಂತ ಆದ್ರೆ.

ಅಜ್ಜ – ಹಾಗಲ್ಲ. ಇದ್ದುಕೊಂಡು ಇಲ್ಲದ ಸ್ಥಿತಿ.

ಪರೀಕ್ಷಿತ – ಹಾಽಽ ಅದು ಸರಿ. ಅದನ್ನ ಬೇಕಾದ್ರೆ ಒಪ್ಪಬಹುದು. ಆ ಶಕ್ತಿಯ ಅಸ್ತಿತ್ವದ ನಾಶ ಆದ್ರೆ ಇಲ್ಲ ಅದು. ಆ ಶಕ್ತಿಯು ಜ್ಞಾನ ಮತ್ತು ಕರ್ಮಗಳಿಂದ ತನ್ನ ಅಸ್ತಿತ್ವವನ್ನು ಕಳೆದುಕೊಂಡ ಮೇಲೆ ಅದುವೇ ಇಲ್ಲ ಅಂತ ಆದ ಮೇಲೆ ಉದ್ದೇಶ ಇಲ್ಲ.

ಅಜ್ಜ – ಆತ್ಮ ಮಾತ್ರ ಇರುವಂಥಾದ್ದು.

ಪರೀಕ್ಷಿತ – ಹಾಗಾದ್ರೆ ಇದು ಜೀವಂತವಾಗಿರುವುದು ಹೇಗೆ? ಒಂದೇ ಪ್ರಶ್ನೆ.

ಅಜ್ಜ – ಆತ್ಮ ಮಾತ್ರ ಇರುವಂಥಾದ್ದು.

ಪರೀಕ್ಷಿತ – ಆತ್ಮವು ನಿಶ್ಚಲ.

ಅಜ್ಜ – ಅಲ್ಲಿ ಸ್ವಲ್ಪ ಇಟ್ಟುಕೊಳ್ಳಬೇಕಾಕ್ತದೆ. ಅಲ್ಲಿ ಸಂಪೂರ್ಣ ವಿಕಾಸವಾದರೆ ದೇಹ ಉಳಿಯುವುದಿಲ್ಲ. ಆತ್ಮ ಮಾತ್ರ.

ಪರೀಕ್ಷಿತ – ಅಲ್ಲಾ. ಈ ದೇಹದ ಸಂಗತಿ ಏನು? ಈ ದೇಹವು ಜೀವಂತವಾಗಿರುವುದು ಶಕ್ತಿಯಿಂದ.

ಅಜ್ಜ – ಇಲ್ಲಿ ಹೇಳ್ಲಿಕ್ಕೆ ಶಬ್ದಗಳು ಸಿಕ್ಕೋದಿಲ್ಲ.

ಪರೀಕ್ಷಿತ – ಅದಕ್ಕೆ ನೀವು ಈ ಶಬ್ದವನ್ನು ಉಪಯೋಗಿಸಿದ್ದು ಯಾಕೆ ಅಂತ್ಹೇಳಿ. ಅಸ್ತಿತ್ವ ನಾಶ ಅಂತ ಆದ್ರೆ.

ಅಜ್ಜ – ಇಲ್ಲಿ ಶಬ್ದ ಉಪಯೋಗಿಸಿದೆ ಅಂದ್ರೆ ಅದೆಲ್ಲ ಒಳಗಿಂದ ಬರುವ ಮಾತುಗಳು. ನಾವಾಗಿ ಉಪಯೋಗಿಸ್ಲಿಕ್ಕೆ ಆಗೋದಿಲ್ಲ.

ಪರೀಕ್ಷಿತ – ಅದು ಸರಿ.

ಅಜ್ಜ – ಕರ್ತೃತ್ವ ಇದ್ರೆ ಉಪಯೋಗಿಸ್ಬೋದಿತ್ತು. ಈಗ ಪ್ರಶ್ನೆ ಕೇಳಿದ್ರೆ ಉತ್ತರ ಹೇಳ್ಲಿಕ್ಕೆ ಇಲ್ಲಿ ಯಾರೂ ಇಲ್ಲ. ಅದು ಬರ್ಬೇಕು. ತನ್ನಿಂದ ತಾನೇ ಬರ್ಬೇಕು. ಇಲ್ಲಿ ಯಾವ್ದು ಉತ್ತರ ಕೊಡ್ಲಿಕ್ಕೆ ಅದೂ ಇದೂ ಎಂಥದ್ದೂ ಬರೋದಿಲ್ಲ.

ಪರೀಕ್ಷಿತ – ಅಲ್ಲಾ ಪ್ರಶ್ನೆ ಕೇಳದೆ ಉಪಾಯ ಇಲ್ಲ ಇಲ್ಲಿ.

ಅಜ್ಜ – ಪ್ರಶ್ನೆ ಕೇಳಬಹುದು.

ಪರೀಕ್ಷಿತ –  ಹೌದು ಹೌದು. ಇಲ್ಲಿ ಅವ ನಂದಲ್ಲ ಅಂತ ತಿಳ್ಕೊಳ್ಳಬಹುದೋ.

ಅಜ್ಜ –  ಆದೀತು. ಆ ಅರಿವು ಆ ಅನುಭವ ಇದೆ ಅಂತ ಹೇಳಿದ್ರೆ ಹೇಗೆ?

ಪರೀಕ್ಷಿತ –  ಅವನ ಶರೀರ ನೋಡಿದ್ರೆ ಗೊತ್ತಾಕ್ತದಲ್ಲ. ಮೂರನೆಯವನಾಗಿ ಕಾಣ್ತಾನಲ್ಲ.

ಅಜ್ಜ –  ನೋಡುವ ಸ್ವಲ್ಪ ಸಮಯದಲ್ಲಿ ಇದು ಗೊತ್ತಾಕ್ತದೆ. ನೋಡುವ.

ಪರೀಕ್ಷಿತ –  ಆದ್ರೆ ಪೋಕು ಮುಡಿದ್ರೆ ಅವ ಹೇಳ್ತಾನೆ.

ಅಜ್ಜ –  ಏನೂಂತ್ಹೇಳಿ.

ಪರೀಕ್ಷಿತ –  ಅSSದು ಗ್ಯಾರೆಂಟಿ ಹೇಳ್ತಾನೆ ಅವನು. ನಾನು ಕಂಡಿದ್ದೇನೆ ಅಂತ್ಹೇಳಿ ಹೇಳ್ತಾನೆ. ಪೋಕು ಮುಟ್ಟಿದ್ರೆ ಅವ ಹೇಳಿಯೇ ಹೇಳ್ತಾನೆ.

ಅಜ್ಜ –  ಅಂದ್ರೆ ಏನಂತ.

ಪರೀಕ್ಷಿತ –  ನನಗೆ ಪರಮ ಸತ್ಯದ ಒಂದು ಅನುಭವ ಆಗಿದೆ ಅಂತ ಪೋಕು ಮುಟ್ಟಿದ್ರೆ ಅವ ಹೇಳ್ತಾನೆ.

ಅಜ್ಜ – ಅನುಭವ ಆಗಿದೆ ಅಂತ ಇಲ್ಲಿ ಬರೋದಿಲ್ಲ. ಅವ ಹೇಳ್ಬಹುದು. ಇವನಿಗೆ ಇಲ್ಲಿ ಅರಿವಾಗ್ಲಿಕ್ಕೆ ಸಾಧ್ಯವೇ ಇಲ್ಲ.

ಪರೀಕ್ಷಿತ –  ಯಾಕೆ?

ಅಜ್ಜ –  ಕರ್ತೃತ್ವ ಇಲ್ಲ.

ಪರೀಕ್ಷಿತ –  ಕರ್ತೃತ್ವ ಇಲ್ಲ ಸರಿ. ಅನುಭವ ಉಂಟೋ ಇಲ್ವೊ.

ಅಜ್ಜ –  ಕರ್ತೃತ್ವ ಇದ್ರೆ ಮಾತ್ರ ಅನುಭವ.

ಪರೀಕ್ಷಿತ –  ಅದು ಹೇಗೆ ಅಜ್ಜ.

ಅಜ್ಜ –  ಅದು ಹಾಗೆ, ಅದು ಹಾಗೆ ಉಂಟಪ್ಪ.  ನೀನು ಹಾಗೆ ನಮ್ಮನ್ನು ಅಮರಿಸಿದರೆ ಹೇಗೆ. ಕರ್ತೃತ್ವವೇ ಹೋದ ಮೇಲೆ ಅವನ ಕೆಲಸಗಳು ಹೇಗೆ ನಡಿತದೆ ಗೊತ್ತುಂಟಾ. ಛೆ. ನಮಗೆ ಹೇಳ್ಳಿಕ್ಕೆ ಅಷ್ಟು ಸ್ಪೀಡ್ ಬರ್ತದೆ. ಕೋಪ ಅಲ್ಲ. ಕೋಪ ಅಂತ ಗ್ರಹಿಸ್ಬೇಡ. ಕೋಪ ಅದು ಬರೋದಿಲ್ಲ.

ಪರೀಕ್ಷಿತ –  ಅಲ್ಲಾ ಇಗೋಳಿ ಅಜ್ಜ. ಕರ್ತೃತ್ವ ನಾಶದ ಅನುಭವ ಹೇಗೆ? ಅನುಭವಿಸುವವನ ಸಂಗತಿಯೇ ಇಲ್ಲ ಅಂದ್ರೆ ಇದು ಹೇಗಜ್ಜಾ ಅರ್ಥಮಾಡಿಕೊಳ್ಳುವುದು.

ಅಜ್ಜ –  ಅವ ಎಲ್ಲಾ ಹೇಳ್ತಾನೆ ಅಷ್ಟೆ. ಕರ್ಮ ಮಾಡಿಯೂ ಮಾಡದೇ ಇರುವಂಥಾ ಒಂದು ಸ್ಥಿತಿ ಹಾಗುಂಟು. ಸ್ಥಿತಿಯಲ್ಲದ ಸ್ಥಿತಿ. ಅವನಿಂದ ಮಾತುಗಳು ಬರ್ತದೆ ಅಷ್ಟೆ. ಹೇಳುವವನು ಅಲ್ಲಿ ಇಲ್ಲ.

ಪರೀಕ್ಷಿತ –  ಹೇಳುವವನು ಅಲ್ಲಿ ಇಲ್ಲವಾ.

ಅಜ್ಜ – ಇಲ್ಲವೇ ಇಲ್ಲ. ಛೆ. ಅದೇ ಕರ್ತೃನಾಶ ಅಂತ ಹೇಳುವಂಥಾದ್ದು. ಕರ್ತೃನಾಶ ಆದ ಕೂಡ್ಲೆ ಹೇಳುವವ ಇಲ್ಲ. ಮತ್ತೆ ಮಾತುಗಳು ಬರ್ತದೆ ಅಷ್ಟೆ. ನಿಮಗೆಲ್ಲಾ ಉತ್ತರ ಕೊಡ್ಲಿಕ್ಕಾಗೋದಿಲ್ಲ. ಮಾತು ಬರ್ತಾ ಉಂಟು. ಅಂದ್ರೆ ಅವನಿಂದ ಮಾತು ಬರೋದು ಮಾತ್ರ ಪ್ರಶ್ನೆಗಳಿಗೆ ಉತ್ತರ ಇಲ್ಲ.

ನಾಗೇಶ – ಹಾಗೆ ಹೇಳ್ತಾರೆ. ಈಗ ಹಗ್ಗವನ್ನು ಸುಟ್ಟು ಹಾಕಿದ್ರೆ . . .

ಅಜ್ಜ – ಆ ಉದಾಹರಣೆ ನಮಗೆ ಗೊತ್ತಿಲ್ಲ. ಅಂಥಾ ಉದಾಹರಣೆಗಳನ್ನು ನಾವು ಕೊಡೋದೇ ಇಲ್ಲ. ಅದ್ಯಾಕೆ. ಅದು ಅನುಕರಣೆಯಾಯಿತು. ಅದು ಅನುಕರಣೆ.

ಪರೀಕ್ಷಿತ – ಇಗೊಳಿ, ನೀವು ಆಗ ಹೇಳಿದ ಹಾಗೆ, ಕಪ್ಪು ಮೋಡ ಉಂಟು. ಕಪ್ಪು ಮೋಡವು ಪರಿವರ್ತನೆ ಆಗಿ ಬಿಳಿ ಮೋಡ ಆಯ್ತು. ಆ ಬಿಳಿ ಮೋಡವು ಆಕಾಶದಲ್ಲಿ ವಿಶಾಲವಾಗಿ ಚದುರಿತು. ಇದು ಈಗ ವಿಕಾಸದ ಸ್ಥಿತಿ ಅಲ್ವಾ. ಈ ಬಿಳಿ ಮೋಡವು ಒಂದು ಮುದ್ದೆಯಾಗಿದ್ದದ್ದು ವಿಕಾಸವಾಗುವುದನ್ನೇ ನೀವು ಅಸ್ತಿತ್ವ ನಾಶ ಅಂತ ಕರೀತೀರಿ.

ಅಜ್ಜ – ವಿಕಾಸವನ್ನು ನಾವು ಸಾವು ಅಂತ ಹೇಳುವಂಥಾದ್ದು.

ಪರೀಕ್ಷಿತ – ಹೌದು. ಅಸ್ತಿತ್ವನಾಶವನ್ನು ಸಾವು ಅಂತ ಹೇಳುವ ನೀವು . . .

ಅಜ್ಜ – ಇನ್ನೆಲ್ಲ ಶಬ್ದಗಳು ಮುಂದೆ ಬಂದಾಗ ಅದನ್ನೇ ಮುಂದುವರಿಸಿಕೊಂಡು ಹೋಗುವಂಥಾದ್ದು ಫೋಟೋ ಬೀಳ್ತವಲ್ಲ. ಮಾತುಗಳೆಲ್ಲಾ ಬೀಳ್ತವೆ ಅದ್ರಲ್ಲಿ.

ಪರೀಕ್ಷಿತ – ಅದು ಅದರಷ್ಟಕ್ಕೆ ಇರ್ಲಿ ಅಜ್ಜ.

ಅಜ್ಜ – ಇಲ್ಲಿನ ಮಾತುಗಳೆಲ್ಲ ಹೆಗೆ ಅಂತ ಹೇಳಿದ್ರೆ ಅದು ಅದರಷ್ಟಕ್ಕೆ ಬರುವಂಥಾದ್ದು. ಕೆಲವು ಸಲ ಕಟ್ ಆಕ್ತದೆ. ಮಾತು ನಿಂತು ಹೋಕ್ತದೆ. ಕೆಲವು ಸಲ ತುಂಬ ಹೊತ್ತು ಬೇಕಾಕ್ತದೆ ಕೆಲವು ಸಲ ಮಾತು ಬರ್ಲಿಕ್ಕೆ.

ಪರೀಕ್ಷಿತ – ವಿಕಾಸವನ್ನೇ ಅಲ್ವಾ ನೀವು ಅಸ್ತಿತ್ವ ನಾಶ ಅಂತ ಹೇಳೋದು.

ಅಜ್ಜ – ಅಂದ್ರೆ ಆತ್ಮನಿಗೊಂದು ಆವರಣ ಉಂಟಾದ್ರೆ ಬಂಧನ ಅಂತ ಹೇಳ್ತದೆ. ಬಹಳ ಸೂಕ್ಷ್ಮ ವಿಚಾರ. ಅವನು ಬಿಡುಗಡೆ ಹೊಂದಿ ಸ್ವತಂತ್ರನಾದ.

ಪರೀಕ್ಷಿತ – ಯಾರು? ಸ್ವತಂತ್ರನಾದದ್ದು ಯಾರೀಗ.

ಅಜ್ಜ – ಈ ಆವರಣಕ್ಕೆ ಒಳಪಟ್ಟುಕೊಂಡಿತ್ತಲ್ಲ.

ಪರೀಕ್ಷಿತ – ಆವರಣಕ್ಕೆ ಒಳಪಟ್ಟುಕೊಂಡಿದ್ದದ್ದು ಯಾವುದು. ಯಾವುದು ಆತ್ಮ.

ಅಜ್ಜ – ಇ ಇ

ಪರೀಕ್ಷಿತ – ಅಂದ್ರೆ ನೀವು ಹೇಳುವ ಅಂತಿಮ ಸತ್ಯ ಉಂಟಲ್ಲ. ಅದುವೆಯಾ ಆವರಣಕ್ಕೆ ಒಳಪಟ್ಟದ್ದು . . .

ಅಜ್ಜ – ಈ ದೇಹದಲ್ಲಿ ಹೇಗೆ ಉಂಟು ಅಂತ ಕೇಳಿದ್ರೆ ನೋಡಿ ಅದಕ್ಕೆಲ್ಲ ವಿವರಗಳು ಉಂಟು ಬೇಕಾದಷ್ಟು. ವಿವರ ಮಾಡುವವ ಒಬ್ಬ ಬೇಕು ಈಗ.

ಪರೀಕ್ಷಿತ – ಅಲ್ಲಾ ನೀವು ಹೇಳಿ.

ಅಜ್ಜ –  ನಮಗೆ ಹೆಚ್ಚು ಹೇಳ್ಲಿಕ್ಕೆ ಬರೋದಿಲ್ಲ. ಸೀರಿಯಸ್ಸಾಗಿ ಹೋಯ್ತು ಅಂತ ಹೇಳಿದ್ರೆ ನೋಡಿ ಅದು ಇಷ್ಟು ಹೇಳ್ಳಿಕ್ಕೆ ಕೂಡ ಆಗೋದಿಲ್ಲ.

ಪರೀಕ್ಷಿತ –  ಅದು ಹಾಗೆ ಆಕ್ತದೆ ಅಜ್ಜ. ಅದು ಇವರಿಗೂ ಹಾಗೆ ಆಗಿಕೊಂಡಿತ್ತು.

ಅಜ್ಜ –  ಆಂ ಆಂ

ಪರೀಕ್ಷಿತ –  ಪರಮಹಂಸರಿಗೂ ಹಾಗೆ ಆಗಿಕೊಂಡಿತ್ತು ಮಾತನಾಡುವಾಗ ನಡುವೆಯೇ ರಪ್ಪ ಅಂತ್ಹೇಳಿ ಅದು ಹಾಗೆ ಅಂಟಿಕೊಂಡಿರ್ಲಿ.

ಅಜ್ಜ –  ಈಗ ಮಾತ್ನಾಡುತ್ತಾ ಇರುವಾಗ . . .  ಪ್ರಶ್ನೆಗಳೇ ಇಲ್ಲ. ಎಲ್ಲ ವಿವರಗಳನ್ನೇ ಕೊಡ್ತಾ ಹೋಕ್ತದೆ ಅಂತು ಉತ್ತರ ಸಿಕ್ತದೆ ಎಂಬುದು ಖಡಾ ಖಂಡಿತ. ಅದು ಹುಡುಕ್ತಾ ಉಂಟು. ಅದಕ್ಕಾಗಿಯೇ ಬಂದದ್ದಲ್ವಾ. ಅದರ ವಿವರಣೆಯನ್ನು ಕೊಡ್ಲಿಕ್ಕಾಗಿಯೇ ಅದು ಬಂದದ್ದು ಹೊರಗೆ ಕೊಡ್ಲೇ ಬೇಕಲ್ಲ.

ಪರೀಕ್ಷಿತ –  ಈ ದೇಹದಲ್ಲಿ ಈಗ ಒಂದು ಶಕ್ತಿ ಉಂಟು ಅಲ್ವಾ. ಈ ದೇಹಕ್ಕೆ ಚಲನೆಯನ್ನು ನೀಡಿದ ಒಂದು ಶಕ್ತಿಯನ್ನು ನೀವು ಆತ್ಮ ಅಂತ ಕರೆಯುವುದು ಅಲ್ವಾ. ಈ ದೇಹ ಚಲಿಸ್ತಾ ಇದೆ.

ಅಜ್ಜ –  ಅದು ಶಕ್ತಿಯಿಂದಾಗಿ ಆ ಶಕ್ತಿಯ ಒಳಗೆ ಆತ್ಮ ಇದ್ದಾನೆ.

ಪರೀಕ್ಷಿತ –  ಆ ಶಕ್ತಿಯ ಒಳಗೆ ಆತ್ಮ ಉಂಟು.

ಅಜ್ಜ –  ಆತ್ಮ ಅಂದ್ರೆ ಬೆಳಕು.

ಪರೀಕ್ಷಿತ –  ಈಗ ಈ ದೇಹ ಉಂಟು, ಈ ದೇಹ ಅನ್ನುವ ಯಂತ್ರವು ಚಲಿಸ್ಲಿಕ್ಕೆ ಒಂದು ಶಕ್ತಿ ಉಂಟು. ಆ ಶಕ್ತಿಯ ಒಳಗೆ ಒಂದು ಬೆಳಕು ಉಂಟು.

ಅಜ್ಜ –  ಆ ಬೆಳಕಿನಿಂದಾಗಿ ಈ ಶಕ್ತಿಯು ಚಲಿಸ್ತದೆ. ಅದರಿಂದಾಗಿ.

ಪರೀಕ್ಷಿತ –  ಆ ಬೆಳಕಿನಿಂದಾಗಿ ಈ ಶಕ್ತಿಗೆ ಶಕ್ತಿ ಬಂದದ್ದು.

ಅಜ್ಜ –  ಈ ಶಕ್ತಿ ಚಲಿಸ್ತದೆ. ಅದರ ಇರುವಿಕೆಯಿಂದ ಈ ದೇಹ ಚಲಿಸ್ತದೆ.

ಪರೀಕ್ಷಿತ –  ಬೆಳಕಿನ ಇರುವಿಕೆಯಿಂದ ಈ ಶಕ್ತಿಗೆ ಚಲಿಸುವ ಶಕ್ತಿ ಬಂತು.

ಅಜ್ಜ –  ಹೌದು.

ಪರೀಕ್ಷಿತ –  ಈ ಚಲಿಸುವ ಶಕ್ತಿಯ ಇರುವಿಕೆಯಿಂದ ದೇಹಕ್ಕೆ ಚಲನೆ ಬಂತು.

ಅಜ್ಜ –  ಆಂ. ಅದು ಕರೆಕ್ಟ್. ಇದು ಕರೆಕ್ಟ್. ಇದು ಅಷ್ಟು ಕರೆಕ್ಟ್ ಬಂತು.

ಪರೀಕ್ಷಿತ –  ಆಯ್ತಾ.

ಅಜ್ಜ –  ಇದನ್ನ ನೋಡ್ಬೇಕು ನಾವು. ಇದು ಪುಸ್ತಕದಿಂದ ಬರುವ ಅನುಭವ ಅಲ್ಲ. ಅದನ್ನು ಅಂತರ್ದೃಷ್ಟಿಯಿಂದ ಆ ಬೆಳಕನ್ನು ನೋಡಬೇಕು. ಅದರ ಹೊರಗಿರುವಂಥಾ ಆವರಣವನ್ನು ನೋಡ್ಬೇಕು. ಅದು ವಿಕಾಸ ಆಗುವಂಥಾದ್ದು. ಎಲ್ಲವನ್ನು ನೋಡ್ಬೇಕು. ಇದು ಎಷ್ಟೋ ಸಮಯದಿಂದ ಬಂತು. ಇದಕ್ಕೆಲ್ಲಾ ಹಿಂದಿನ ಜನ್ಮದ ಸಂಸ್ಕಾರಗಳಿರಬಹುದು.

ಪುನರ್ಜನ್ಮವನ್ನು ಒಪ್ಪುವವರಿಗೆ ಹೇಳುವಂಥಾದ್ದು ನಾವು. ಹಿಂದಿನ ಸಂಸ್ಕಾರದಿಂದ. ಇದು ಒಂದೇ ಜನ್ಮದಿಂದ ಆದದ್ದಲ್ಲ. ಯಾಕೇಂದ್ರೆ ಅದು . . .

ಪರೀಕ್ಷಿತ – ಅದು ಅಷ್ಟು ಆಳವಾದ ಸಂಗತಿ.

ಅಜ್ಜ – ಮಾಯೆಯಿಂದ ಏನ್ಹೇಳ್ತಾರೆ. ಮಾಯಾವರಣದಿಂದ

ನಾಗೇಶ – ಕಳಚುವುದು.

ಅಜ್ಜ – ಕಳಚುವುದು ಅಂದ್ರೆ . . . ಮತ್ತೆ ಅವನ ಮಟ್ಟಿಗೆ . . . ಅವ ಹೇಳ್ತಾನೆ. ಬೆಳಕು ಮಾತ್ರ ಇರುವಂಥಾದ್ದು ಅಂತ್ಹೇಳಿ. ಮತ್ತೆ ಯಾವ್ದು ಇಲ್ಲ. ಬೆಳಕು ಮಾತ್ರ. ಆವರಣ ಹೋದ ಮೇಲೆ ಮತ್ತೆ ವರ್ಣಿಸ್ಲಿಕ್ಕೆ ಶಬ್ದಗಳು ಸಿಕ್ಕೋದಿಲ್ಲ. ಇದಕ್ಕೊಬ್ಬ ಒಳ್ಳೆ ವಿದ್ವತ್ ಮಾಡಿದವ, ಒಳ್ಳೆ ತಿಳಿದವ ಒಬ್ಬ ಬೇಕು. ಯಾಕೆಂದ್ರೆ ಅವ ಇದನ್ನೆಲ್ಲಾ ವಿವರಿಸ್ತಾನೆ.

ಪರೀಕ್ಷಿತ – ಈಗ ನೀವು ಹೇಳಿದ್ರಲ್ಲಾ. ಈಗ ದೇಹ, ದೇಹವು ಚಲಿಸ್ಲಿಕ್ಕೊಂದು ಶಕ್ತಿ. ಶಕ್ತಿಗೆ ಶಕ್ತಿಯನ್ನು ನೀಡಿದ ಒಂದು ಬೆಳಕು.

ಅಜ್ಜ – ಹೌದು.

ಪರೀಕ್ಷಿತ – ಆ ಬೆಳಕು . . .

ಅಜ್ಜ – ಅದುವೇ ಆಧಾರ. ಆಧಾರಸ್ತಂಭ ಅದು.

ಪರೀಕ್ಷಿತ – ಹೌದು ಈಗ ಆ ಬೆಳಕುಂಟಲ್ಲ. ಆ ಬೆಳಕನ್ನೇ ನೀವು ಹೇಳ್ತಾ ಇರೋದು ಆತ್ಮ ಅಂತ. ಅಂತಿಮ ಅಲ್ವಾ.

ಅಜ್ಜ – ಹೌದು.

ಪರೀಕ್ಷಿತ – ಆ ಎರಡಕ್ಕೆ ಯಾವ ವ್ಯತ್ಯಾಸವೂ ಇಲ್ಲ.

ಅಜ್ಜ – ಆಂ ಏನು.

ಪರೀಕ್ಷಿತ – ಈ ಶಕ್ತಿಯ ಒಳಗೆ ಅಂತರ್ಯಾಮಿಯಾಗಿರತಕ್ಕ ಬೆಳಕು. ಅಂದ್ರೆ ಆ ಬೆಳಕಿಗೂ, ಇಡೀ ವಿಶ್ವಕ್ಕೆ ಆಧಾರ ಸ್ವರೂಪವಾಗಿರುವ ಬೆಳಕಿಗೂ ಯಾವ ವ್ಯತ್ಯಾಸ ಉಂಟಾ?

ಅಜ್ಜ – ಇಲ್ಲ.

ಪರೀಕ್ಷಿತ – ಯಾವ ವ್ಯತ್ಯಾಸವೂ ಇಲ್ಲಾ.

ಅಜ್ಜ – ಹೌದು.

ಪರೀಕ್ಷಿತ – ಯಾವ ವ್ಯತ್ಯಾಸವೂ ಇಲ್ಲ. ಅದು ಇದೆ. ಅಲ್ವಾ, ಯಾವ ಭಾವನೆಯೂ ಇಲ್ಲ.

ಅಜ್ಜ – ಅದು ಈ ಸೂರ್ಯನ ಬೆಳಕಲ್ಲ.

ಪರೀಕ್ಷಿತ – ಹಾಂ. ಗೊತ್ತಾಯ್ತು. ಸ್ಪಷ್ಟ ಗೊತ್ತಾಯ್ತು.

ಅಜ್ಜ – ಹ. ಹ. ಹ.

ಪರೀಕ್ಷಿತ – ಸೂರ್ಯನಿಗೂ ಬೆಳಕು ಕೊಟ್ಟ ಬೆಳಕು ಅಲ್ವಾ.

ಅಜ್ಜ – ಹೌದು ಹೌದು.

ಪರೀಕ್ಷಿತ – ಈಗ ಆ ಬೆಳಕಿನಿಂದಾಗಿಯೇ ಶಕ್ತಿಯನ್ನು ಪಡೆದಿರತಕ್ಕ ಶಕ್ತಿಯು, ಆ ಬೆಳಕಿನಿಂದಾಗಿಯೇ ಚಲಿಸುವ ಶಕ್ತಿಯನ್ನು ಪಡೆದಿರತಕ್ಕ ಶಕ್ತಿಯು

ಅಜ್ಜ – ಪಡೆದಿರತಕ್ಕ ಶಕ್ತಿ ಅಂತ್ಹೇಳಿ ಆಗ್ಲಿಲ್ಲ.

ಪರೀಕ್ಷಿತ – ಮತ್ತೆ ಆ ಶಕ್ತಿಯು ಶಕ್ತಿ ಆದದ್ದು, ಶಕ್ತಿ ಅನ್ನಿಸಿಕೊಂಡದ್ದು ಬೆಳಕಿನಿಂದ ಅಲ್ವಾ.

ಅಜ್ಜ – ನೋಡುವ ಅದನ್ನೆ ಮಾಯೆ ಅಂತ ಹೇಳುವಂಥಾದ್ದು.

ಪರೀಕ್ಷಿತ – ಯಾವುದನ್ನು.

ಅಜ್ಜ – ಈ ಶಕ್ತಿಯನ್ನು.

ಪರೀಕ್ಷಿತ – ಈಗ ನೋಡಿ. ದೇಹವು ಚಲಿಸ್ತಾ ಇರುವಂಥಾದ್ದು ಈ ಮಾಯಾ ಶಕ್ತಿಯಿಂದ.

ಅಜ್ಜ – ಹಾಂ. ಮಾಯಾ ಶಕ್ತಿಯಿಂದ.

ಪರೀಕ್ಷಿತ – ಅಲ್ವಾ.

ಅಜ್ಜ – ಆ ಇದರ (ಬೆಳಕಿನ) ಇರುವಿಕೆಯಿಂದ ಈ ಮಾಯಾ ಶಕ್ತಿಗೆ ಚೇತನ ಬಂತು.

ಪರೀಕ್ಷಿತ – ಅದು ಸರಿ. ಬೆಳಕಿನ ಇರುವಿಕೆಯಿಂದ ಈ ಮಾಯಾಶಕ್ತಿಗೆ ಅಂದ್ರೆ ಏನದು. ಅದರ ವಿವರಣೆ ಮಾಡ್ಬೇಕೀಗ.

ಅಜ್ಜ – ಅದು ವರ್ಣನಾತೀತ.

ಪರೀಕ್ಷಿತ – ಹಾಗಾದ್ರೆ ಮನುಷ್ಯರು ಪ್ರಾಣ ಬಿಡುವಾಗ ಹೋಗುವಂಥಾದ್ದು ಈ ಮಾಯಾಶಕ್ತಿ ಹಾಗಾದ್ರೆ. ಅಲ್ವಾ.

ಅಜ್ಜ – ತುಂಬ ಕೆಲಸ ಉಂಟಪ್ಪ ಇಲ್ಲಿ.

ಪರೀಕ್ಷಿತ – ಅದೆಂಥದ್ದು ಅಂತ ಹೇಳಿ ಅಜ್ಜ. ಹೇಳ್ಬೇಕೀಗ. ಸ್ಪಷ್ಟವಾಗಿ ಒಂದು ಅರ್ಥ ಆಗ್ಬೇಕೀಗ.

ಅಜ್ಜ – ಅರ್ಥ ಆಗ್ಲಿಕ್ಕೆ ಇದೂ . . . ನೋಡಿ . . .

ಪರೀಕ್ಷಿತ – ಈಗ ಹಾಗಾದ್ರೆ ಜಗತ್ತಿನಲ್ಲಿ ಮನುಷ್ಯರು ಪ್ರಾಣ ಬಿಡುವಾಗ, ದೇಹವನ್ನು ಬಿಟ್ಟು ಹೋಗುವಂಥಾದ್ದು ಯಾವ್ದು.

ಅಜ್ಜ – ದೇಹವನ್ನು ಬಿಟ್ಟು ಹೋಗುವಂಥಾದ್ದು ಈ ಮಾಯಾ ಶಕ್ತಿಯು.

ಪರೀಕ್ಷಿತ – ಹಾಗಾದ್ರೆ ದೇಹವನ್ನು ಬಿಟ್ಟು ಹೋಗುವಂಥಾದ್ದು ಈ ಮಾಯಾ ಶಕ್ತಿ ಮತ್ತು ಅದರೊಳಗಿರತಕ್ಕ ಬೆಳಕು ಎರಡು ಒಟ್ಟಿಗೆ ಹೋಗ್ತದೆ. ಈ ದೇಹದಲ್ಲಿ ಹಾಗಾದ್ರೆ ಆ ಬೆಳಕಿಲ್ವಾ. ಈ ಶವದಲ್ಲಿ ಇಲ್ವಾ.

ಅಜ್ಜ – ಅದು ಉಂಟು. ಅದು ಎಲ್ಲಾ ಕಡೆ ಆ ಬೆಳಕುಂಟು.

ಪರೀಕ್ಷಿತ – ಅದು ಸರ್ವವ್ಯಾಪಿ.

ಅಜ್ಜ – ಅದು ಇಲ್ಲಿಯೂ ಉಂಟು. ಡೆಡ್ ಬಾಡಿಯಲ್ಲಿ ಉಂಟು. ಆದರೆ ಶಕ್ತಿ ಇಲ್ಲ.

ಪರೀಕ್ಷಿತ – ಹಾಗಾದ್ರೆ ಹೀಗಾಯ್ತಜ್ಜ. ಮಾಯಾಶಕ್ತಿಯ ಒಳಗೂ ಬೆಳಕುಂಟು. ಈ ದೇಹದ ಕಣಕಣದಲ್ಲಿಯೂ ಆ ಬೆಳಕುಂಟು. ಹಾಗಾದ್ರೆ ಈ ದೇಹಕ್ಕೆ ಚಲನೆ ಬಂದದ್ದು ಈ ಮಾಯಾಶಕ್ತಿಯಿಂದ ಅಂತ ಆಯ್ತು. ಅಲ್ವಾ.

ಅಜ್ಜ – ಒಳಗೂ ಹೊರಗೂ ಒಟ್ಟು ಬೆಳಕುಂಟು. ಅದಿಲ್ಲದ ಸ್ಥಳವೇ ಇಲ್ಲ.

ಪರೀಕ್ಷಿತ – ಸರಿ ಹಾಗಾದ್ರೆ ಈ ದೇಹವು ಚಲಿಸ್ತಾ ಇದ್ದದ್ದು ಆ ಮಾಯಾಶಕ್ತಿಯಿಂದ ಹೌದಾ.

ಅಜ್ಜ – ಸರಿ. ಇದೆಲ್ಲ ನೋಡಿ ಆ ದಿವ್ಯ ಜೀವನದಲ್ಲಿ ಉಂಟು. ಅದನ್ನ ವರ್ಣಿಸ್ಲಿಕ್ಕೆ ಗಂಟೆಗಟ್ಲೆ ಬೇಕು. ಈಗ ಅಂದ್ರೆ ಈಗಲ್ಲ. ಅಷ್ಟು ಸಾಹಿತ್ಯಗಳು ಬೇಕಾಕ್ತವೆ. ನಮಗೆ ಸಾಹಿತ್ಯ ಇಲ್ಲ. ಅಂಥದ್ದಕ್ಕೆ ನಮಗೆ ಬನ್ನಂಜೆ ಅಂಥವರ ಹಾಗೆ ಇದ್ದವರಾಗ್ಬೇಕಷ್ಟೆ. ಆಗ ನಾವು ಕೊಡ್ತದೆ. ಒಟ್ಟು ವಿಚಾರವಾದಿಗಳಿಗೆ ಇದನ್ನ ಕೊಡ್ತದೆ. ವಿಚಾರವಾದಿಗಳಿಗೆ ಇದು ಹೋಗದೆ ಸಾಧ್ಯವೇ ಇಲ್ಲ. ನಾವು ಬೆಳಕಿಗೆ ಬರುವುದು ಅಲ್ಲ. ಯಾವ ಇದಕ್ಕೂ ಒಪ್ಪುವುದಿಲ್ಲ.

ಪರೀಕ್ಷಿತ – ಅದು ಸರಿ ಅಜ್ಜಾ. ಈಗ ಅನುಭವ ಆದವರು ಎಲ್ಲರೂ ಹಾಗೆ.

ಅಜ್ಜ – ಇಲ್ಲಿ ಕರ್ತೃತ್ವ ಮತ್ತು ಸಂಕಲ್ಪ, ಕರ್ಮ ಮೂರು ಇಲ್ಲದ ಸ್ಥಿತಿ. ಕರ್ಮ ಇಲ್ಲಿ ಇಲ್ಲ ಅಂತ ಹೇಳಿದ್ರೆ ನೀವು ಒಪ್ಲಿಕ್ಕಿಲ್ಲ. ಯಾಕೆಂದ್ರೆ ಇಲ್ಲಿ ಮಾಡುವಷ್ಟು ಕರ್ಮವನ್ನು ನೀವು ಮಾಡ್ಲಿಕ್ಕಾಗೋದಿಲ್ಲ. ಹಾಗಾಗಿ ಇಲ್ಲಿ ಕರ್ಮ ಇಲ್ಲ ಅಂತ್ಹೇಳಿದ್ರೆ ನೀವೆಲ್ಲ ಒಪ್ಲಿಕ್ಕಿಲ್ಲ. ನೋಡಿ. ನಾಗೇಶನ ಮನೆಗೂ ನಮಗು ಏನು ಸಂಬಂಧ ಇಲ್ಲ. ಆದ್ರೂ ಹೋಗಿ ಅಲ್ಲಿ ಬಿಸಿಲಿಗೆ ನಿಂತುಕೊಳ್ತದೆ. ಕೆಲಸ ಮಾಡಿಸ್ತದೆ. ಈ ದೇಹಕ್ಕೆ ಪ್ರಾಯ ಇದ್ದಿದ್ರೆ, ನಾವೇ ಮಾಡಿಬಿಡ್ತದೆ. ನಿಮಗೆ ಯಾರಿಂದ್ಲೂ ಸಾಧ್ಯ ಇಲ್ಲ ಬಿಡಿ. ಹಾಗಾದ್ರೆ ಕರ್ಮ ಇಲ್ಲ ಅಂತ್ಹೇಳಿದ್ರೆ ನೀವು ಒಪ್ತಿರೋ. ನಾವು ನಿಮ್ಮ ಎದುರು ಕರ್ಮ ಮಾಡ್ತಾ ಉಂಟು. ನೀವು ಒಪ್ತಿರೋ ಅವ ಹೇಳುವುದು ಸುಳ್ಳು ಡೋಂಗಿ ಅಂತ್ಹೇಳಿ ನಿಮಗೆ ಕಾಣಬಹುದು. ಆದ್ರೆ ನಾವು ಮಾಡುವುದು ಕರ್ಮವಲ್ಲ. ಕರ್ತೃತ್ವ ಇಲ್ಲದ ಕರ್ಮ ಅಂದ್ರೆ ಏನು? ಛೆ. ಇದ್ರಷ್ಟು ದೊಡ್ಡ ಕೆಲಸ ಯಾವುದುಂಟು ಇನ್ನು. ಆ ಮಾತುಗಳು ಇಲ್ಲಿಂದ ಬರ್ತದೆ. ಎಲ್ಲಿಂದ ಬರ್ತದೆ ಆ ಮಾತುಗಳು. ಈ ಮಾತುಗಳು ವಿಶ್ವ ವ್ಯಾಪ್ತಿಯಾಗಿ ಹೋಯ್ತು. ಇಲ್ಲಿಂದ ಬರುವ ಮಾತುಗಳು ನಿಮ್ಮ ಟಿ.ವಿ, ರೇಡಿಯೋ, ಫೋಟೋ ಎಲ್ಲ ಆಮೇಲೆ. ಹೋಯ್ತು ಇದು ಗಾಳಿಯಲ್ಲಿ. ಇದನ್ನು ಎಲ್ಲಿದ್ದವನು ಬೇಕಾದ್ರೂ ಸಂಗ್ರಹ ಮಾಡ್ಬಹುದು. ಅಂಥಾ ಶಕ್ತಿ ಇದ್ರೆ ಪ್ರತಿಯೊಬ್ಬನಿಗೂ ಹೀಗೆ ಅದು ಇಲ್ಲಿ ಮಾತ್ರ ಅಲ್ಲ.

ಪರೀಕ್ಷಿತ – ಹೌದು ಹೌದು. ಆ ಅನುಭವ ಆದ್ರೆ ಹೀಗೆಯೆ.

ಅಜ್ಜ – ಛೆ. ಅವನ ಕಥೆ ಹೇಳೋದಿಲ್ಲ. ಇದು ಅನುಭವಾತೀತ. ಮತ್ತೆ ಹೆಗೆ ಮಾತು ಬರ್ತದೆ ಅಂದ್ರೆ, ಯಾರಿಗ್ಗೊತ್ತು. ಮಾತು ಬರ್ತದೆ ಹೌದು. ರೇಡಿಯೋದಲ್ಲಿ ಮಾತು ಬರ್ತದೆ, ಟಿ.ವಿಯಲ್ಲಿ ಮಾತು ಬರ್ತದೆ. ಯಾರು ಮಾತಾಡುವುದು ಅಂತ ನಾವು ಕೇಳಿದ್ರೆ. ಆ ಟಿ.ವಿ. ಹೇಳ್ತದೋ ಇವನಿಗೆ ಉತ್ತರ ಕೊಡ್ತದೋ ಎಲ್ಲಿಂದ ಮಾತು ಬರುವುದು ಅಂತ್ಹೇಳಿ. ಅದೇ ರೀತಿ ನಾವು ಶುರುವಿಗೇ ಹೇಳಿದೆ. ನಿಮ್ಮ ರೇಡಿಯೋಕಾದ್ರು ಹತ್ತು ಸಾವಿರ ರೂಪಾಯಿ ಬೆಲೆ ಉಂಟು, ಇದಕ್ಕೆ ನೈಯಾಪೈಸೆ ಬೆಲೆ ಉಂಟಾ. ಇದು ಡೆಡ್ ಬಾಡಿ ಆದ್ರೆ ಇದಕ್ಕೇ ಒಂದು ಸಾವಿರ ರೂಪಾಯಿ ಖರ್ಚು ಮಾಡ್ಬೇಕು. ಹೀಗುಂಟು. ಅದನ್ನು ಹ್ಯಾಗೆ ವರ್ಣಿಸುವುದುಂತ್ಹೇಳಿ.

ಪರೀಕ್ಷಿತ – ಈ ನೋಡಿ, ಈಗ ರೇಡಿಯೋ ಇದೆ ಅಂತ್ಹೇಳಿ ಇಟ್ಟುಕೊಳ್ಳುವ. ಸ್ಟೇಷನ್ನಿನಲ್ಲಿ ಮಾತಾಡ್ತಾರೆ. ಅದು ಈ ರೇಡಿಯೋದ ಮುಖಾಂತರ ನಮಗೆ ಕೇಳ್ತಗೆ. ಹಾಗೆಯೇ ಈ ದೇಹವೆಂಬ ಯಂತ್ರದ ಮುಖಾಂತರ ಮಾತಾಡುವವನು ಯಾರು? ಅವ ಎಲ್ಲಿದ್ದಾನೆ.

ಅಜ್ಜ – ಮಾತ್ನಾಡುವವ ಇಲ್ಲ. ಆದ್ರೆ, ಮಾತುಗಳು ಬರ್ತದೆ.

ಪರೀಕ್ಷಿತ –ಅಥವ ಅವನ್ನ ಹೀಗೆ ಹೇಳ್ಬೊದ ಅಜ್ಜ, ಇಗೊಳಿ ಮಾತ್ನಾಡ್ತಾ ಇರುವವನಿಗೆ ನಾನು ಮಾತ್ನಾಡ್ತಾ ಇದ್ದೇನೆ ಎನ್ನುವ ಭಾವನೆ ಇಲ್ಲದೆ ಮಾತ್ನಾಡ್ತಾ ಇದ್ದಾನೆ.

ಅಜ್ಜ – ಇಲ್ಲ ಆ ಭಾವನೆ ಕೂಡ ಇಲ್ಲ. ಅದು ಹಾಗೆ ಆಗುವುದಿಲ್ಲ.

ಪರೀಕ್ಷಿತ – ಯಾವ ಭಾವನೆಗಳೂ ಇಲ್ಲದ ಒಂದು ಸಂಗತಿ ಅಲ್ಲಿ ಉಂಟೋ. ಸ್ಥಿತಿಯಲ್ಲದ ಸ್ಥಿತಿಯಲ್ಲಿರುವ ಒಂದು ಸಂಗತಿ ಅಲ್ಲಿ ಉಂಟೋ ಇಲ್ವೋ.

ಅಜ್ಜ – ಇಲ್ಲ ಸಾಧ್ಯವೇ ಇಲ್ಲ.

* * * * *

ಆನಂದ ಕುಟೀರ, ಪುತ್ತೂರು ೩೦–೦೨–೨೦೦೦

ಕೆಲವರೊಡನೆ ಸಂಭಾಷಣೆ.

ಒಬ್ಬರು – ಅಜ್ಜ ಮಾತ್ನಾಡ್ತಾರೆ ಅಂತ್ಹೇಳಿ ಬಂದಿದ್ದೇವೆ.

ಅಜ್ಜ – ಹಾಗೆ ಮಾತ್ನಾಡ್ಲಿಕ್ಕೆ ಆಗೋದಿಲ್ಲ.

ತೊಳ್ನಾಡಿ – ಅದು ಒಂದು ಲಹರಿ ಬಂದಾಗ ಮಾತ್ರ ಮಾತಾಡ್ಲಿಕ್ಕೆ ಆಕ್ತದೆ. ಇಲ್ಲದಿದ್ರೆ ಯಾವಾಗ್ಲೂ ಆಗೋದಿಲ್ಲ. ಹಾಗೆ ಒಂದೆರಡು ದಿವಸ ನೀವು ಫ್ರೀ ಮಾಡಿಕೊಂಡು ಬಂದ್ರೆ ಆದೀತು.

ಒಬ್ಬರು – ವಾರಕ್ಕೊಮ್ಮೆ ಸತ್ಸಂಗ ಮಾಡ್ಲಿಕ್ಕೆ ಪ್ರಾರಂಭ ಮಾಡಿದ್ದೇವೆ ಈಗ.

ಅಜ್ಜ – ಹೌದಾ

ಒಬ್ಬರು – ದಾರಿ ಹುಡುಕ್ಲಿಕ್ಕೆ ಶುರು ಮಾಡಿದ್ದೇವೆ.

ಅಜ್ಜ – ಆಗ್ಲಿ. ಹ. ಹ. ದಾರಿ ಹುಡುಕ್ಲಿಕ್ಕೆ ಶುರು ಮಾಡಿದವನಿಗೆ ದಾರಿ ಸಿಕ್ಲೇ ಬೇಕಲ್ಲ. ಅಂ.

ಒಬ್ಬರು – ತಮ್ಮಂಥ ಪೂಜ್ಯರ ಆಶೀರ್ವಾದ ಇದ್ರೆ . . .

ಅಜ್ಜ – ಅದೆಲ್ಲ ಆಮೇಲೆ ಸಿಕ್ಕುವಂಥಾದ್ದು. ಹುಡುಕ್ಲಿಕ್ಕೆ ಹೊರಡುವಾಗ ಮತ್ತೆ ಅದೆಲ್ಲ ಒಂದಕ್ಕೊಂದು ಜೋಡಿಸಿಕೊಂಡು ಹೋಕ್ತದೆ. ಮೊದಲು ನಾವು ಹೊರಡಬೇಕು ಅಲ್ವಾ. ಮೊದಲು ನಮಗೆ ಹಸಿವೆ ಆಗ್ಬೇಕು. ಅದಾಗ್ಬೇಕಾದ್ದು ಮೊದಲು ಇದಕ್ಕೆ ಶರಣಾಗತಿ ಒಂದೇ ದಾರಿ. ಎಲ್ಲವು ನೀನೆ ನೀನೆ ಅಂತ ಆದ್ರೆ ಮತ್ತೆ ನಾನು ಉಂಟಾ. ಆಗ ನೀನೇ ನಾನು. ಅಂದರೆ ಆ ನಾನು ಬರ್ತದೆ. ಇದು ಒಂದು ದೊಡ್ಡ ಅಹಂಕಾರ ಆಯ್ತು. ಈ ದೇಹವೇ ನಾನು ಅನ್ನುವ ಅಹಂಕಾರಕ್ಕಿಂತ ದೊಡ್ಡ ಅಹಂಕಾರ ಇದು. ಇದೂ ಹೋಗ್ಬೇಕು. ನೀನೇ ನಾನಾಗುವುದು ಹೇಗೆ? ನೀನು ಪರಮಾತ್ಮ, ನಾನು ಪರಮಾತ್ಮನಲ್ಲ. ನೋಡಿ ನಾನು ಅಂದ್ರೆ ಈ ಮನಸ್ಸು ಹೇಳುವಂಥಾದ್ದು ನೀನು ಆನಂದ ಸ್ವರೂಪಿ ಅಂದರೆ ಪರಮಾತ್ಮ. ಹಾಗಾದ್ರೆ ನಾನು? ನಿನ್ನ ಇರುವಿಕೆಯನ್ನು ಸೂಚಿಸುವ ಸಂಕೇತ ರೂಪ ನಾನು. ನಾನು ಅಂದರೆ ನೀನು. ಆ ನಾನುವಿನ ವಿಕಾಸತ್ವವೇ ಸಾಕ್ಷಾತ್ಕಾರ. ನೋಡಿ ಮತ್ತೆ ಅದಕ್ಕೆ ಹೋಕ್ತದೆ. ನಾನು ಯಾರು? ಎಂಬುದು ಅಲ್ಲಿ

ಬರ್ತದೆ. ಎಲ್ಲಿ ನಾನು ಅಂದರೆ ನೀನು ಎಂಬಲ್ಲಿ. ಹಾಗಾದ್ರೆ ನಾನು ಯಾರು? ಎಂಬ ವಿಚಾರದಿಂದ ಆ ನಾನು ತನ್ನ ಅಸ್ತಿತ್ವವನ್ನು ಕಳಕೊಂಡಾಗ . . . ಹಾಗಾದ್ರೆ ಬಂಧನಕ್ಕೂ ಬಿಡುಗಡೆಗೂ ಕಾರಣ ಮನಸ್ಸೆ ಅಂತ್ಹೇಳಿ ಆಯ್ತು. ಆ ಕಾರಣ ದೇಹದ ಮೇಲೆ ಈ ಮನಸ್ಸು ಬಂದು ಕೇಂದ್ರೀಕೃತವಾಗಬೇಕು. ಆಗ ನಾನು ಅಂದರೆ ನೀನು. ನೀನೇ ನಾನಲ್ಲ. ನೀನೇ ನಾನಲ್ಲ. ನಾನು ಅಂದರೆ ನೀನು. ಆ ನಾನು ವಿಕಾಸವಾದಾಗ ನೋಡಿ ಮತ್ತೆ ಅಲ್ಲಿ ನಾನುವಿನ ಪ್ರಶ್ನೆಯೇ ಇಲ್ಲ. ಒಂದು ಉಂಟು ಒಂದು ಸ್ವಯಂ ಪ್ರಕಾಶ.

ತೊಳ್ನಾಡಿ – ಹಾಗಾದ್ರೆ ಒಂದು ಉಂಟು.

ಅಜ್ಜ – ಹೌದು ಒಂದು ಪ್ರಕಾಶ ಉಂಟು.

ತೊಳ್ನಾಡಿ – ಅಸ್ತು.

ಅಜ್ಜ – ಅದು ಉಂಟು ಅಂತ ಹೇಳುವವನೂ ಇಲ್ಲ. ಅಲ್ಲಿ ಅದರ ಅರಿವೂ ಇಲ್ಲ. ಯಾವುದೂ ಇಲ್ಲ. ಅದು ಲೋಕಕ್ಕಾಗಿ ಜನರಿಗಾಗಿ ಹೀಗೆ ಹೇಳ್ತದೆ. ಅವನ ಸ್ವತಃಕ್ಕೆ ಯಾವುದೂ ಇಲ್ಲ. ಅದು ಉಂಟು ಅಂತ ಹೇಳುವವನ ಅಸ್ತಿತ್ವವೇ ಇಲ್ಲ ಅಲ್ಲಿ. ಹೀಗುಂಟು. ಆದ್ರೆ ಅವ ಪ್ರಪಂಚಕ್ಕಾಗಿ ಸ್ವಲ್ಪ ಇಟ್ಟುಕೊಳ್ಳಬಹುದು. ಇಂಥಾದ್ದೊಂದು ಉಂಟು ಅಂತ್ಹೇಳಿ ಜನ್ರಿಗೆ ಹೇಳ್ಳಿಕ್ಕಾಗಿ ಕಾರಣದೇಹವನ್ನು ಸ್ವಲ್ಪ ಇಟ್ಟುಕೊಳ್ತಾನೆ. ಇಲ್ಲದಿದ್ರೆ ದೇಹ ಉಳಿಲಿಕ್ಕಿಲ್ಲ. ಅದನ್ನ ಇಟ್ಟುಕೊಳ್ಳುವುದು ಅವನ ಕೈಯಲ್ಲಿ ಉಂಟು. ಅದಕ್ಕೆ ಅವನು ಬಲಿ ಬೀಳೋದಿಲ್ಲ.

ತೊಳ್ನಾಡಿ – ಈಗ ಮನಸ್ಸು ಮತ್ತು ಬುದ್ಧಿಗೆ ಆಚೆ ಇರುವುದನ್ನು . . . ಅದು ಇದೆ ಅಂತ್ಹೇಳಿ ಇವನಿಗೆ ಗೊತ್ತಾಕ್ತದೆ.

ಅಜ್ಜ – ಹೌದು ಶೋಧನೆಯೆಲ್ಲ ಆದ ಮೇಲೆ ಅದು ಮನಸ್ಸು ಬುದ್ಧಿಗೆ ಎಟುಕುವುದಿಲ್ಲ ಅಂತ ಅವ ಹೇಳ್ತಾನೆ. ಶೋಧನೆ ಮಾಡುವಲ್ಲಿವರೆಗೆ ಅದು ಉಂಟು. ಆದ ಮೇಲೆ ನೋಡಿ ಆಯ್ತು. ಶೋಧನೆ ಮಾಡುವವನೇ ತನ್ನ ಅಸ್ತಿತ್ವವನ್ನು ಕಳಕೊಂಡ. ಇದು ಆದಾಗ ಮಾತ್ರ ಅಲ್ಲಿ ನಾನು ಅಂದರೆ . . . ಅಲ್ಲಿ ಬಿಡಿಸ್ಲಿಕ್ಕೆ ಬರ್ತದೆ. ವಿಕಾಸ ಆದಾಗ ಇದು ಬೇರೆ ಅದು ಬೇರೆ ಅಂತ ಇದ್ರೆ ಶೋಧನೆ ಆಗೋದೆ ಇಲ್ಲ. ಅಲ್ವಾ. ಅದಕ್ಕೆ ಹೇಳೋದು ಧ್ಯಾನ ಮಾಡುವವನು ಧ್ಯಾನದಿಂದ ಧ್ಯಾನಮಾಡಲ್ಪಡುವವನೆ ಆದಾಗ ಅಲ್ಲಿಂದ ಪ್ರಾರಂಭ ಆಯ್ತು. ನಾನು ಯಾರು? ಅಂ. ಇದು ಅದುವೇ ಆಯ್ತು ಇಲ್ಲಿ. ಈ ಮನಸ್ಸುಂಟಲ್ಲ ಇದು ಅದ್ರಲ್ಲಿ ಕೇಂದ್ರೀಕೃತ ಆದಾಗ ನಾನು ಅಂದರೆ ಅದುವೆ. ಈ ನಾನು ಯಾರು? ನಾನು ಅಂದ್ರೆ ಅದುವೇ ಅಂತ್ಹೇಳಿ ನಿಲ್ಲಿಲ್ಲ ಅಲ್ಲಿ. ಅಲ್ಲಿಂದ ಪ್ರಾರಂಭ ಆಯ್ತು.

ಒಬ್ಬರು – ಮುಂದೆ ಅದು ವಿಕಾಸ ಆಕ್ತಾ ಹೋಗ್ಬೇಕ ಅದು. ಬೆಳೀಬೇಕಾ.

ಅಜ್ಜ – ಇದೇ ಆವರಣದ ವಿಕಾಸ. ಆತ್ಮನಿಗೆ ಒಂದು ಆವರಣ ಉಂಟು. ಆ ಆವರಣ ಬಂದಾಗ ಇದೆಲ್ಲ ಆಯ್ತು. ಆ ಆವರಣವನ್ನು ಕಳಚಿಕೊಂಡಾಗ, ಅಲ್ಲಿ ನೋಡ್ಲಿಕ್ಕುಂಟು. ಈ ಆವರಣದಿಂದಾಗಿ ಇದೆಲ್ಲ. ಇದನ್ನೆ ಮಾಯೆ ಅಂತ ಹೇಳ್ತಾರೆ. ಆವರಣ ಶಕ್ತಿ ಅಂದರೆ ಕಾರಣದೇಹ. ಕಾರಣದೇಹ ಒಡೆದಾಗ ಮಾತ್ರ ಮತ್ತೆ ಜನ್ಮಕ್ಕೆ ಬರ್ಲಿಕ್ಕಿಲ್ಲ. ಮತ್ತೆ ಅಲ್ಲಿ ಬರುವವನೇ ಇಲ್ಲ. ಇದನ್ನ ಸರಿಯಾಗಿ ವಿವರಿಸಿ ಹೆಳ್ಳಿಕ್ಕೆ ನಮ್ಗೆ ಶಬ್ದಗಳ . . . ಸಾಹಿತ್ಯ ಇಲ್ಲ. ಇನ್ನೊಬ್ಬರು ಕೇಳಿದ ಪ್ರಶ್ನೆಗೆ, ಆಧಾರಯುತವಾಗಿ ಹೇಳ್ಳಿಕ್ಕೆ ನಮಗೆ ಶಾಸ್ತ್ರಾಧಾರಗಳು ಗೊತ್ತಿಲ್ಲ. ಬರೀ ಅದರ ಅನುಭವ ಹೊರೆತು ಅದಕ್ಕೆ ಮಾತಿನಲ್ಲಿ ವಿವರಣೆ ಕೊಟ್ಟು ಒಬ್ಬನ ಮನಸ್ಸನ್ನ ಮೆಚ್ಚಿಸ್ಲಿಕ್ಕೆ ನಮಗೆ ಆಗೋದಿಲ್ಲ. ಅವರ ವಸ್ತುಸ್ಥಿತಿ ಹಾಗೆ ಉಂಟು. ಈಗ ದೊಡ್ಡ ಒಂದು ಮರ ಉಂಟು. ಇದರ ಶೋಧನೆ ಮಾಡ್ಲಿಕ್ಕೆ ಆಗ್ಲಿಕ್ಕೊಗ್ಲಿಕ್ಕುಂಟ. ಅದರ ಸೊಪ್ಪು, ಗೆಲ್ಲು ಅದು ಇದು, ಆ್ಞಂ. ಒಂದು ಗೆಲ್ಲು ಕಡಿದರೆ ಚಿಗುರ್ತದೆ. ಹೇಗೆ ಅದಾಗ್ಲಿಕ್ಕೇ ಇಲ್ಲ. ಆ ಮರದ ತಾಯೀ ಬೇರಿನ ಶೋಧನೆಯಲ್ಲಿ ಅಲ್ಲಿ ಮಾಡಿದಾಗ ಇಡೀ ಮರವೇ ಆರು ತಿಂಗಳಿನಲ್ಲಿ ಹೋಯ್ತು. ತಾಯಿ ಬೇರನ್ನು ಒಂದನ್ನು ಶೋಧನೆ ಮಾಡಿದ್ರೆ ಸಾಕು. ಅಲ್ಲ ಮಾಡಿ ಆಗ್ಲಿಕ್ಕಿಲ್ಲ. ತಾಯಿ ಬೇರನ್ನು ಒಂದನ್ನು ಮಾತ್ರ ಅದು ಬಹಳ ಒಂದು ಶೋಧನೆ. ಇದೇ ನಾನುವನ್ನು ಕಳಕೊಳ್ಳುವಂಥದ್ದು. ಮನಸ್ಸಿನ ಮೂಲವನ್ನು ಶೋಧನೆ ಮಾಡು ಅಂತ್ಹೇಳಿ. ಮನಸ್ಸಿನ ಮೂಲ ಯಾವುದು? ಮೂಲ ಪ್ರಕೃತಿ. ಈ ಮನಸ್ಸು ಒಂದು ಪ್ರಕೃತಿ ಅಲ್ವಾ. ಪ್ರಕೃತಿಯಿಂದ ಉಂಟಾದದ್ದು. ಆ ಮೂಲ ಪ್ರಕೃತಿಯನ್ನು ಶೋಧನೆ ಮಾಡ್ಬೇಕು. ಆ ಮೂಲ ಪ್ರಕೃತಿಯಲ್ಲಿ ಈ ಮನಸ್ಸನ್ನು ಕೇಂದ್ರೀಕರಿಸಿ ಶೋಧನೆ ಮಾಡುವಂಥಾದ್ದು.

ತೊಳ್ಪಾಡಿ – ಕೇಂದ್ರೀಕರಿಸ್ಲಿಕ್ಕೆ ಅದು ಕಾಣಬೇಕಲ್ಲ.

ಅಜ್ಜ – ಠ್ಞಂ.

ತೊಳ್ಪಾಡಿ – ಅದು ಕಾಣದೆ ಎಲ್ಲಿ ಅಂತ ಕೇಂದ್ರೀಕರಿಸುವುದು. ಒಂದು ಭಾವಿಸಬಹುದಷ್ಟೇ.

ಅಜ್ಜ – ಭಾವಿಸಿದ್ರೆ ಆಗೋದಿಲ್ಲ. ಈಗ ಹೃದಯದಲ್ಲಿ ಪರಮಾತ್ಮ ಅಂದ್ರೆ ಒಂದು ಶಕ್ತಿ ಉಂಟು ಅಂತ್ಹೇಳಿ ಗ್ರಹಿಸ್ಲಿಕ್ಕೆ ಎಲ್ರಿಗೂ ಗೊತ್ತುಂಟು. ಆದೋಗೋದಿಲ್ಲ. ಏನಾದ್ರು ಒಂದು ಕಿಡಿ ಬೀಳಬೇಕಲ್ಲಿ. ಬೀಳ್ಳಿಕ್ಕೆ ಸುಲಭ ಉಂಟು.

ತೊಳ್ಪಾಡಿ – ಅದು ಇದೆ ಅಂದ್ರೆ ಬೀಳಲೇ ಬೇಕು.

ಅಜ್ಜ – ಅದು ಇದೆ. ಆದ್ರಿಂದ ಬಿದ್ದೇ ಬೀಳ್ತದಲ್ಲಪ್ಪಾ. ಠ್ಞಂ. ಆವಾಗ ಗೊತ್ತಾಯ್ತು ಅವ್ನಿಗೆ ಹೋ ಸಂಗತಿ ಹೀಗೆ ಉಂಟು ಅಂತ್ಹೇಳಿ. ಮತ್ತೆ ಮನಸ್ಸು ಆಚೆಗೆ ಹೋಯ್ತು.

ಒಬ್ಬರು – ಕಿಡಿ ಬೀಳುವುದು ಯಾತರ ಮೇಲ? ಮನಸ್ಸಿನ ಮೇಲೋ.

ಅಜ್ಜ – ಅದು ಈ ಮನಸ್ಸಿಗೆ ಗೊತ್ತಾಗ್ಬೇಕು. ಇದಕ್ಕೆಲ್ಲ ಉಪನಿಷತ್ತಿನ ಆಧಾರ ಕೊಟ್ಟು ಹೇಳುವಂಥಾದ್ದು ಭಯಂಕರ ಉಂಟು. ನೋಡಿ ಅಸತ್ಯದಿಂದ ನನ್ನನ್ನು ಸತ್ಯದ ಕಡೆಗೆ ಕೊಂಡು ಹೋಗು. ಅಲ್ಲಿಗೆ ಸತ್ಯ ಗುರಿಯಾಯಿತು. ಅಲ್ಲಿಗೆ ನನ್ನನ್ನು ಕೊಂಡುಹೋಗು. ಹಾಗಾದ್ರೆ ಈ ಅಸತ್ಯದ ಮೂಲ ಯಾವುದಾಯ್ತು. ಎಂಥದಿದು ಕಥೆ ಎಂಥದ್ದು. ಹ. ಹ. ಹ. ಹಾಗಾದ್ರೆ ಇವನು ಹುಡುಕಬೇಕಾದ್ದೆಲ್ಲ ಒಳಗೆ ಇದೆ ಅಂತಾಯ್ತು. ಈಗ ನದಿಯು ಹೋಗಿ ಸಾಗರಕ್ಕೆ ಸೇರುವಂಥಾದ್ದು ನದಿಯ ಗುರಿ ಅಂತ್ಹೇಳಿ ಅಲ್ವಾ. ಅದ್ರ ಮೂಲ ಯಾವುದು.

ತೊಳ್ಪಾಡಿ – ಸಾಗರ.

ಅಜ್ಜ – ಅದ್ರ ಮೂಲ ಕಾಣೋದಿಲ್ಲ. ಹಾಗಾಗಿ ಒಬ್ಬ ಹೇಳ್ತಾನೆ ಒಂದು ಗುಡ್ಡೆ ಅಂತ್ಹೇಳಿ. ಅದು ಒಂದು ಗುಡ್ಡೆಯಿಂದ ಬರೋದು ಅದ್ರಿಂದ ಅಂತ.

ಎಲ್ಲರೂ – ಹ. ಹ. ಹ.

ಅಜ್ಜ – ಯಾವಾಗ ಅದು ಅಲ್ಲಿ (ಸಾಗರ) ಹೋಗಿ ಸೇರಿತೋ, ಹಾಗದ್ರೆ ಅದುವೇ ಅದರ ಮೂಲ ಅಂತ ಆಯ್ತು. ಇದೇ ರೀತಿ ಇದೆಲ್ಲವೂ ಒಳಗೇ ಆಗ್ಬೇಕೀಗ. ಆ ಮನಸ್ಸುಂಟಲ್ಲ ಅದು ಅದರ ಮೂಲಕ್ಕೆ ಹೋಗದೆ ಯಾವ ಕೆಲಸವೂ ಇಲ್ಲ. ಮರದ ತಾಯಿಬೇರನ್ನು ಶೋಧನೆ ಮಾಡ್ಬೇಕು.

ತೊಳ್ಪಾಡಿ – ಉಪನಿಷತ್ತು ಒಂದನ್ನು ಹೇಳ್ತದೆ. ಹೊರಗೆ ಹೋಗುವುದನ್ನು ನಿಲ್ಲಿಸಿದ್ರೆ ಹೇಗಾದ್ರೂ ಮಾಡಿ, ನೀನು ಏನಾದ್ರೂ ಮಾಡು, ಎಂತ ಬೇಕಾದ್ರೂ ಮಾಡು, ಮನಸ್ಸು ಹೊರಗೆ ಹೋಕ್ತಾ ಉಂಟಲ್ಲ, ಅದನ್ನು ನಿಲ್ಲಿಸಿದ್ರೆ ಅದು ಒಳಗೆ ಹೋಗದೆ ಉಪಾಯ ಇಲ್ಲ.

ಅಜ್ಜ – ಹೌದು. ಅದಕ್ಕೆ ಏನಾದ್ರು ಒಂದು ಹಿಡಿತ ಬೇಕಲ್ಲ.

ತೊಳ್ಪಾಡಿ – ಯಾಕೇಂದ್ರೆ ಅದಕ್ಕೊಂದು ಗತಿ ಇದೆ.

ಅಜ್ಜ – ಅದಕ್ಕೊಂದು ಹಿಡಿತ ಇಲ್ಲದೇ ಇದ್ರೆ ಅದು ನಿಲ್ಲೋದಿಲ್ಲ.

ತೊಳ್ನಾಡಿ – ಅದು ಸುಮ್ಮನೆ ನಿಲ್ಲಿಕ್ಕೆ ಸಾಧ್ಯ ಇಲ್ಲ. ಅದು ಎಲ್ಲಿಯಾದ್ರೂ ಹೋಗ್ಬೇಕು.

ಅಜ್ಜ – ಇದನ್ನು ಬಿಟ್ರೆ ಅದನ್ನ ಹೋಗಿ ಹಿಡೀತದೆ ಅದು ಮತ್ತೆ.

ತೊಳ್ನಾಡಿ – ಹೌದು. ಅದನ್ನ ಹಿಡೀತದೆ. ಹೊರಗೆ ಹೋಗುವುದನ್ನು ನಿಲ್ಲಿಸುವುದೇ ಇರೋದು. ಬೇರೆ ಏನೂ ಇಲ್ಲ. ಮತ್ತೆಲ್ಲ ಉಂಟು ಅಂತ. ಸುಲಭದ ಮಾರ್ಗ ಒಂದನ್ನ ಹೇಳ್ತದೆ. ಸುಲಭ ಅಂತ ಕಾಣುವಂಥದ್ದು.

ಅಜ್ಜ – ಮನಸ್ಸು ಒಳಗೇ ಉಂಟಲ್ಲ. ಅದನ್ನು ಹೊರಗೆ ಹೋಗ್ಲಿಕ್ಕೆ ಬಿಡಬೇಡ ಅಂತ್ಹೇಳಿ. ಹೊರಗಿದ್ದ ಮನಸ್ಸನ್ನು ಒಳಗೆ ಕೊಂಡೋಗಿ ಕೇಂದ್ರೀಕರಿಸುವುದರ ಬದ್ಲಿಗೆ. ಮನಸ್ಸಿರುವುದು ನಿಜವಾಗಿ ಒಳಗೆ ಅಲ್ವಾ. ಇಲ್ಲಿ (ಹೊರಗೆ ತೋರಿಸುತ್ತಾ) ಉಂಟ. ಅದನ್ನ ಅಲ್ಲೇ ನಿಲ್ಲಿಸು. ಹೊರಗೆ ತರೋದು ಬ್ಯಾಡ.

ತೊಳ್ನಾಡಿ – ನಮ್ಮದೆಲ್ಲ ಒಳಗೆ ಮಾತ್ರ ಅಲ್ಲ ಇರೋದು. ಅದು ಹೊರಗೂ ಉಂಟು.

ಅಜ್ಜ – ಹೊರಗೆ ಎಲ್ಲಿ.

ತೊಳ್ನಾಡಿ – ಹೊರಗೆ ಎಲ್ಲೆಲ್ಲಿಯೂ ಉಂಟು.

ಅಜ್ಜ – ಹಾಗಲ್ಲ. ಒಳಗಿಂದ ಹೊರಗೆ ಬಂದಾಗ ಎಲ್ಲ ಉಂಟು. ಬರೋದು ಒಳಗಿಂದ್ಲೆ. ಹೊರಗೆ ಬಂದಾಗ ವಿಶಿಷ್ಟವಾಗಿ ವಿಶ್ವವ್ಯಾಪಿಯಾಗಿ ಹೋಕ್ತದೆ.

ತೊಳ್ನಾಡಿ – ಅದು ಬಂದಾಗಿದೆ ಅಲ್ವಾ ಅಜ್ಜ.

ಅಜ್ಜ – ಆದ್ರೂ ಅದರ ಮೂಲವನ್ನು ನೋಡುವಾಗ ಎಲ್ಲಿ ಉಂಟು ಅಂತ್ಹೇಳಿ.

ತೊಳ್ನಾಡಿ – ಅದು ಬಂದಾಗಿದೆ. ಸಂಸಾರ ಅಂದ್ರೆ ಇದೆ.

ಅಜ್ಜ – ಅದಕ್ಕೋಸ್ಕರ ಶೋಧನೆಗಳೆಲ್ಲ ಇರೋದು. ಬಂದಾದ ಕಾರಣ. ಇದರಲ್ಲಿ ಗೊಂದಲಗಳು ಸಂಭವಿಸಿದಾಗ ನೋಡೋದು ಇದರ ಮೂಲ ಎಲ್ಲಿ ಉಂಟು. ಹೊರಗೆ ಉಂಟೋ, ಒಳಗೆ ಉಂಟೋ? ಒಳಗೆ ಉಂಟು. ಅಲ್ಲೇ ನಿಲ್ಲಿಸು. ಅಲ್ಲೇ ನಿಲ್ಲಿಸಬೇಕಾದ್ರೆ ಆ ಮೂಲದ ಮೇಲೆ ಇವನಿಗೆ ದೃಷ್ಟಿ ಬೀಳ್ಬೇಕು. ಆ ಮೂಲದ ಒಂದು ದೃಷ್ಟಿ ಇವನಿಗೆ ಬಿದ್ದಾಗ ಮಾತ್ರ . . .

ಒಬ್ಬರು – ಆ ದೃಷ್ಟಿ ಬಿದ್ದಾಗ ಇವನಿಗೆ ಏನು ಅನುಭವ ಆಕ್ತದೆ.

ಅಜ್ಜ – ಅಲ್ಲಿ ಮತ್ತೆ ಅನುಭವದ ವಿಚಾರ ಇಲ್ಲ. ಮನಸ್ಸು ಅಲ್ಲಿಗೆ ಹೋಕ್ತದೆ. ಮತ್ತೆ ನಾನು ಅಂದ್ರೆ ಅದೂ ಅಂತ್ಹೇಳಿ ಮತ್ತೆ. ಅನುಭವ ಅದು. ನಾನು ಅಂದ್ರೆ ಇದಲ್ಲ. ನಾನು ಅಂದ್ರೆ ಅದು. ಅದರ ಅನುಭವ ಆದಾಗ ನಾನು ಅಂದ್ರೆ ಅದು. ಅದರ ಅಸ್ತಿತ್ವ ಹೋಗ್ಬೇಕೀಗ. ಅದು ಪೂರ್ಣವಲ್ಲ. ಅದು ಅಪೂರ್ಣ. ಅಹಂ ಬ್ರಹ್ಮಾಸ್ಮಿ ಅಂತ್ಹೇಳಿ ಹೇಳ್ತಾರೆ. ಅಂದ್ರೆ ನಾನು ಬ್ರಹ್ಮನೇ ಆಗಿದ್ದೇನೆ. ಅಲ್ಲಿ ನಾನು ಉಂಟು. ನಾನು ಆಗಿದ್ದೇನೆ ಎಂಬ ಒಂದು ಇದುಂಟು ಅಲ್ಲಿ. ಅದು ಒಳ್ಳೇದೋ ಕೆಟ್ಟದ್ದೊ ಗೊತ್ತಿಲ್ಲ. ಒಳ್ಳೆದೇ ಆಗಿರಬಹುದು. ನಾನು ಅದುವೇ ಆಗಿದ್ದೇನೆ ಅಂತ. ಅದು ಈ ನಾನು ಹೇಳುವಂಥಾದ್ದಲ್ಲ. ಮತ್ತೊಂದು ನಾನು, ಆ ಮೂಲ ನಾನು ಹೇಳುವಂಥಾದ್ದು ನಾನು ಬ್ರಹ್ಮವೇ ಆಗಿದ್ದೇನೆ ಅಂತ. ನಿಜವಾಗಿ ಆ ಬ್ರಹ್ಮವೇ ಆದಾಗ ಆಗಿದ್ದೇನೆ ಅಂತ ಹೆಳುವವನ ಅಸ್ತಿತ್ವ ಅಲ್ಲಿ ಇಲ್ಲ ಮತ್ತೆ. ಮತ್ತೆ ಎಲ್ಲುಂಟು. ಅದು ಇರೋಲ್ಲಿವರೆಗೆ ಅವ ಆಗ್ಬೇಕಷ್ಟೇ. ಅದು ಆಗ್ಲಿಕ್ಕೆ ಸುಲಭ ಉಂಟು. ಮತ್ತೆ ಹೋಕ್ತಾನೆ ಅವ. ಅಲ್ಲಿ ಹೋದಾಗ, ನಾನು ಆಗಿದ್ದೇನೆ ಅಂತ ಅನುಭವ ಆಗುವವನು ಅಲ್ಲಿ ಇಲ್ಲ. ಅದು ಅನುಭವಾತೀತ.

ದೇಹವನ್ನು ಬಿಟ್ಟು ಜೀವಾತ್ಮ ಹೋಗುವಂಥಾದ್ದು ಸಾವಲ್ಲ. ಅದು ದೇಹದಲ್ಲಿರುವಾಗ್ಲೇ ಸಾವು ಸಂಭವಿಸುವಂಥಾದ್ದು. ಸಾವಿನಾಚೆಗಿನ ಅನುಭವ. ಆಗ ಹಾಂ ನಮ್ಮನ್ನು ಬಿಟ್ಟುಬಿಡಿ. ಹೀಗೆ ಹೇಳ್ತದಷ್ಟೇ. ನಮ್ಮನ್ನು

ಬಿಟ್ಟು ಎಲ್ಲ ತಕ್ಕೊಳ್ಳಿ. ಆ ಅನುಭವ ಆದವನಿಗೆ ನೋಡಿ, . . . ದೇಹದಲ್ಲಿರುವಾಗ್ಲೇ ಸಾವು ಸಂಭವಿಸಬೇಕು. ಆದ್ರೆ ದೇಹವು ಇರ್ಬೇಕು. ಅವನ ಅಸ್ತಿತ್ವ ಹೋಗ್ಬೇಕು. ಇದು ಸಾಧ್ಯ. ಅದಕ್ಕೆ ಸಾವು ಸಂಭವಿಸಬೇಕು. ಆತ್ಮಕ್ಕಲ್ಲ. ಅದರ ವಿಚಾರ ಬೇರೆ. ನಾನು ಅಂದರೆ ಆತ್ಮ. ಆತ್ಮನಿಂದ ಸ್ವತಃ ಉಂಟಾದವನು ನಾನು. ನಾನು ಅದುವೇ ಆಗಿರುವೆನು, ಎಂಬ ವಿಚಾರದಿಂದ ಈ 'ನಾನು' ವಿಕಾಸ ಹೊಂದಿದಾಗ, ಸ್ಫೋಟವಾದಾಗ ಆಯ್ತು. ಅದು ಆಗಿದ್ದೇನೆ ಅಂತ ಮತ್ತೆ ಯಾವ್ದು ಅಲ್ಲಿಲ್ಲ. ಅರಿಯುವವನೂ ಇಲ್ಲ. ಅರಿಯಲ್ಪಡುವವನಿದ್ರೂ, ಅರಿಯುವವನಿಲ್ಲ. ಯಾऽऽವ್ದು ಮತ್ತೆ ಇಲ್ಲ. ಅದು ಸಾಕ್ಷಿರೂಪವಾಗಿ ಉಂಟು. ಅವ ಕರ್ಮ ಮಾಡ್ತಾನೆ, ವಿಶಿಷ್ಟ ಕರ್ಮ ಮಾಡ್ತಾನೆ. ಆದ್ರೆ ಅವನಿಗೆ ನಾನು ಮಾಡ್ತೇನೆ ಎಂಬ ಭಾವನೆ ಇಲ್ಲ. ಥೆ. ಕರ್ತೃತ್ವವಿಲ್ಲದ ಕರ್ಮಗಳು ಆಕ್ತಾ ಉಂಟು. ಆ ಕರ್ತೃಸ್ಥಾನ ಇರುವಲ್ಲಿವರೆಗೆ . . . ಆಂ. ಸಾಕು.

*****